ಆ) ನಬಾರ್ಡ್ ಹಾಗೂ ಇನ್ನಿತರ ಯೋಜನೆಗಳಿಂದ ಅಭಿವೃದ್ಧಿಗೊಂಡ ರಸ್ತೆಗಳನ್ನು ಹಾಗೂ ತಾಲ್ಲೂಕುಗಳನ್ನು ಜೋಡಿಸುವ ರಸ್ತೆಗಳನ್ನು ಮೇಲ್ದರ್ಜೇಗೇರಿಸಲು ಸರ್ಕಾರಕ್ಕೆ ಇರುವ ತೊಂದರೆಗಳೇನು,

ಇ) ಇದರ ಬಗ್ಗೆ ಸರ್ಕಾರ ಕೈಗೊಳ್ಳಲಿರುವ ಮುಂದಿನ ಕ್ರಮಗಳೇನು?

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು).

ಅ) 2005–06 ಮತ್ತು 2006–07 ರ ಸಾಲಿನಲ್ಲಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಯಾವುದೇ ರಸ್ತೆಗಳನ್ನು ಮೇಲ್ದರ್ಜೆಗೇರಿಸಿರುವುದಿಲ್ಲ

ಆ ಮತ್ತು ಇ) ಡಾ॥ ನಂಜುಂಡಪ್ಪನವರ ವರದಿಯನ್ವಯ ಪ್ರದಾಶೀಕ ಅಸಮತೋಲನ ನಿವಾರಣೆ ಕುರಿತು ನಬಾರ್ಡ್ ಹಾಗೂ ಇನ್ನಿತರೆ ಯೋಜನೆಗಳಿಂದ ಅಭಿವೃದ್ಧಿಗೊಂಡ ಗ್ರಾಮೀಣ ರಸ್ತೆಗಳನ್ನು ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ

1557 (1923) ಶ್ರೀ ಐವಾನ್ ನಿಗ್ಲಿ (ನಾಮಾಂಕಿತ) – ಮಾನ್ಯ ಯುವಜನ ಸೇವಾ ಹಾಗೂ ಕ್ರೀಡಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಕ್ರೀಡಾಂಗಣಗಳ ಸಂಖ್ಯೆಗಳು ಎಷ್ಟು? (ಜಿಲ್ಲಾವಾರು ವಿವರ ನೀಡುವುದು)

ಆ) ಈ ಕ್ರೀಡಾಂಗಣಗಳಲ್ಲಿ ಉಪಯೋಗದಲ್ಲಿರುವುವು ಎಷ್ಟು,

ಇ) ರಾಜ್ಯದಲ್ಲಿರುವ ಹಾಕಿ ಕ್ರೀಡಾಂಗಣಗಳು, ಮುಖ್ಯವಾಗಿ ಕೊಡಗು ಜಿಲ್ಲೆಯಲ್ಲಿ,

ಈ) ಈ ರಾಜ್ಯದಲ್ಲಿರುವ ಕ್ರೀಡಾಂಗಣಗಳ ಸ್ಥಿತಿ,

ಉ) ಒಂದು ಕಾಲದಲ್ಲಿ ಒಲಂಪಿಕ್ಸ್ ಮತ್ತು ವಿಶ್ವಕಪ್‌ನಲ್ಲಿ ರಾಜ್ಯದ ಕ್ರೀಡಾಪಟುಗಳು ಪ್ರಭುತ್ವ ಸಾಧಿಸಿದ ಹಾಕಿ ಕ್ರೀಡೆಯನ್ನು ಸುಧಾರಿಸುವ ನಿಟ್ಟಿನಲ್ಲಿ ಸರ್ಕಾರದ ಮುಂದೆ ಪ್ರಸ್ತಾವನೆ ಇದೆಯೇ,

ಊ) ನಮ್ಮ ದೇಶವನ್ನು ಪ್ರತಿನಿಧಿಸುವ ರಾಜ್ಯದ ಕ್ರೀಡಾಪಟುಗಳಿಗೆ ಯಾವ ಸವಲತ್ತುಗಳನ್ನು ನೀಡಲಾಗುತ್ತಿದೆ,

ಖ) ಕೊಡಗು ಜಿಲ್ಲೆಯಲ್ಲಿ ಪ್ರತಿ ವರ್ಷ ಕೊಡವ ಕುಟುಂಬದ ಸುಮಾರು 200 ಕ್ಕೂ ಹೆಚ್ಚು ಕೊಡವ ಕುಟುಂಬದ ಪಂಗಡಗಳು ಯಾವುದೇ ಲಿಂಗ ವಯೋಮಾನ ಭೇದವಿಲ್ಲದೆ ಏಪ್ರಿಲ್ ತಿಂಗಳ ಆದ್ಯಂತ ಸಂಘಟಿಸಿ ಭಾಗವಹಿಸುತ್ತಿರುವುದರ ಜನಪ್ರಿಯತೆಯು ಸರ್ಕಾರದ ಗಮನಕ್ಕೆ ಬಂದಿದೆಯೇ,

ಖಖ) ಹಾಗಿದ್ದಲ್ಲಿ ಈ ತರಹದ ಕ್ರೀಡಾಕೂಟಗಳಿಗೆ ಸರ್ಕಾರವು ಇವುಗಳ ಸುಧಾರಣೆ ಹಾಗೂ ಉನ್ನತಿಗಾಗಿ ರಾಜ್ಯದಲ್ಲಿ ಏನು ಕ್ರಮ ತೆಗೆದುಕೊಂಡಿದೆ?

ಶ್ರೀ ಹನುಮಂತಪ್ಪ ವೈ ಆಲ್ಕೋಡ್ (ಯುವಜನಸೇವಾ ಹಾಗೂ ಕ್ರೀಡಾ ಸಚಿವರು)

ಅ) 1) ರಾಜ್ಯದಲ್ಲಿ 26 ಜಿಲ್ಲಾ ಕ್ರೀಡಾಂಗಣಗಳು ಪೂರ್ಣಗೊಂಡಿರುತ್ತವೆ (ಅನುಬಂಧ–ಎ) ರಂತೆ ಇವೆ

2) 29 ತಾಲ್ಲೂಕು ಮಟ್ಟದ ಕ್ರೀಡಾಂಗಣಗಳು (ಅನುಬಂಧ–ಬಿ) ರಂತೆ ಇವೆ

3) ಒಳಾಂಗಣ ಕ್ರೀಡಾಂಗಣಗಳು (ಅನುಬಂಧ–ಸಿ) ರಂತೆ ಇವೆ

ಆ) 66 ಕ್ರೀಡಾಂಗಣಗಳು ಉಪಯೋಗದಲ್ಲಿವೆ

ಇ) 1) ಬೆಂಗಳೂರು ಅಕ್ಕಿತಿಮ್ಮನಹಳ್ಳಿಯಲ್ಲಿ ಇರುವ ಹಾಕಿ ಕ್ರೀಡಾಂಗಣ

2) ಭಾರತೀಯ ಕ್ರೀಡಾ ಪ್ರಾಧಿಕಾರದವರು ಮಡಕೇರಿಯಲ್ಲಿ ನಿರ್ಮಿಸುತ್ತಿರುವ ಅಂತರರಾಷ್ಟ್ರೀಯ ಮಟ್ಟದ ಅಸ್ಟ್ರೋಟರ್ಫ್ ಹಾಕಿ ಕ್ರೀಡಾಂಗಣ

ಈ) ರಾಜ್ಯದಲ್ಲಿ ಪೂರ್ಣಗೊಂಡಿರುವ ಎಲ್ಲಾ ಕ್ರೀಡಾಂಗಣಗಳು ಸುಸ್ಥಿತಿಯಲ್ಲಿವೆ

ಉ) ಇದೆ ರಾಜ್ಯದಲ್ಲಿ ಹಾಕಿ ಆಟದ ಸುಧಾರಣೆಯ ನಿಟ್ಟಿನಲ್ಲಿ ಹಾಗೂ ನಮ್ಮ ಬಾಲಕ ಬಾಲಕಿಯರನ್ನು ಒಲಂಪಿಕ್ಸ್ ಕ್ರೀಡಾಮಟ್ಟಕ್ಕೆ ತರುವ ಉದ್ದೇಶದಿಂದ ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯು ಕ್ರೀಡಾ ಶಾಲೆಯನ್ನು ಕೂಡಿಗೆಯಲ್ಲಿ (ಕೊಡಗು ಜಿಲ್ಲೆ) ತೆರೆದಿದ್ದು, ಇಲ್ಲಿ 14 ವರ್ಷದ ಒಳಗಿನ ಬಾಲಕ ಬಾಲಕಿಯರನ್ನು ಆಯ್ಕೆ ಮಾಡಲಾಗುತ್ತಿದೆ ಈ ಕ್ರೀಡಾಪಟುಗಳಿಗೆ ಎನ್ ಐ ಎಸ್ (ಎಸ್ ಎ ಐ) ಎಸ್ ಎಕೆ ಪರಿಣಿತ ಅರ್ಹತೆಯುಳ್ಳ ತರಬೇತುದಾರಿಂದ ನವೀನ ಮಾದರಿಯ ವೈಜ್ಞಾನಿಕ ಕೌಶಲ್ಯವುಳ್ಳ ತರಬೇತಿಯನ್ನು ಈ ಕ್ರೀಡಾಪಟುಗಳಿಗೆ ನೀಡಲಾಗುತ್ತಿದೆ

9/62

ಈ ಕ್ರೀಡಾಪಟುಗಳಿಗೆ ವಿವಿಧ ಹಾಕಿ ಟೂರ್ನಾಮೆಂಟ್‌ನಲ್ಲಿ ಭಾಗವಹಿಸುವ ಅವಕಾಶವನ್ನು ಕಲ್ಪಿಸಿ ಅವರ ಕ್ರೀಡಾ ಪ್ರತಿಭೆಯನ್ನು ಹೊರಹೊಮ್ಮಿಸುವ ಹಾಗೂ ಅದನ್ನು ಸುಧಾರಿಸುವ ನಿಟ್ಟಿನಲ್ಲಿ ಕ್ರಮವನ್ನು ಕೈಗೊಳ್ಳಲಾಗುತ್ತಿದೆ

ಬೆಂಗಳೂರಿನ ಅಕ್ಕಿತಿಮ್ಮನಹಳ್ಳಿಯಲ್ಲಿರುವ ಹಾಕಿ ಕ್ರೀಡಾಂಗಣ ಸಮುಚ್ಚಯದಲ್ಲಿರುವ ವಸತಿ ನಿಲಯವನ್ನು ಭಾರತೀಯ ಕ್ರೀಡಾ ಪ್ರಾಧಿಕಾರಕ್ಕೆ ಹಸ್ತಾಂತರಿಸಲಾಗಿದ್ದು, ಅಲ್ಲಿ ರಾಜ್ಯದ ಬಾಲಕ/ಬಾಲಕಿ ಹಾಕಿ ಕ್ರೀಡಾಪಟುಗಳಿಗೆ ಈ ಕ್ರೀಡಾಂಗಣದಲ್ಲಿ ಅವಕಾಶ ಕಲ್ಪಿಸಿದ್ದು, ಇಲ್ಲಿ ಭಾರತೀಯ ಕ್ರೀಡಾ ಪ್ರಾಧಿಕಾರದ ತರಬೇತಿದಾರರು ಸುಮಾರು 50 ಕ್ಕಿಂತ ಹೆಚ್ಚು ಹಾಕಿ ಕ್ರೀಡಾಪಟುಗಳಿಗೆ ತರಬೇತಿಯನ್ನು ನೀಡುತ್ತಿದ್ದಾರೆ

ಭಾರತ ಕ್ರೀಡಾ ಪ್ರಾಧಿಕಾರವು ಮಡಕೇರಿಯಲ್ಲಿ ಆಸ್ಟ್ರೋಟರ್ಫ್ ಕ್ರೀಡಾಂಗಣವನ್ನು ನಿರ್ಮಿಸಿದ್ದು, ಕ್ರೀಡಾ ಶಾಲೆಯನ್ನೂ ಸಹ ನಡೆಸುತ್ತಿದೆ ಪ್ರಸ್ತುತ 2006–07 ನೇ ಸಾಲಿನಲ್ಲಿ ಯುವಜನಸೇವಾ ಮತ್ತು ಕ್ರೀಡಾ ಇಲಾಖೆಯು 23 ಕ್ರೀಡಾ ಶಾಲೆಗಳನ್ನು ಹೊಸದಾಗಿ ವಿವಿಧ ಕ್ರೀಡಾ ಕ್ಷೇತ್ರದಲ್ಲಿ ತೆರೆದಿದ್ದು, ಇದರಲ್ಲಿ ಹಾಕಿ ಕ್ರೀಡೆಗಾಗಿಯೇ 6 ಕ್ರೀಡಾ ಶಾಲೆಗಳನ್ನು ಬರೆದಿದ್ದು, ಇಲ್ಲಿ ಹಾಕಿ ತರಬೇತಿಯನ್ನು ನೀಡಲಾಗುತ್ತಿದೆ

ಊ) ರಾಜ್ಯದಿಂದ ಅಂತರರಾಷ್ಟ್ರ ಮಟ್ಟದ ಕ್ರೀಡಾಕೂಟಗಳಲ್ಲಿ ರಾಜ್ಯವನ್ನು ಪ್ರತಿನಿಧಿಸುವ ಕ್ರೀಡಾಪಟುಗಳಿಗೆ ಈ ಕೆಳಗಿನಂತೆ ಸವಲತ್ತುಗಳಿಗೆ ಪರಿಗಣಿಸಲಾಗುತ್ತಿದೆ

1) ವೈದ್ಯಕೀಯ, ಇಂಜನಿಯರಿಂಗ್, ಪಾಲಿಟೆಕ್ನಿಕ್ ವೃತ್ತಿಪರ ಶಿಕ್ಷಣ ಕೋರ್ಸ್‌ಗಳಿಗೆ ಕ್ರೀಡಾ ಕೋಟಾದಡಿಯಲ್ಲಿ ಪ್ರವೇಶ ನೀಡುವ ಅವಕಾಶ

2) ಬಿಡಿಎ ಇವರು ನೀಡುವ ನಿವೇಶನಕ್ಕೆ ಶಿಫಾರಸ್ಸು

3) ಭಾರತೀಯ ಕ್ರೀಡಾ ಪ್ರಾಧಿಕಾರವು ನೀಡುವ ಸ್ಕಾಲರ್‌ಶಿಪ್ ಶಿಫಾರಸ್ಸು

4) ಮಾಧ್ಯಮಿಕ ಮತ್ತು ಪ್ರೌಢ ಶಾಲಾ ವಿದ್ಯಾರ್ಥಿಗಳಿಗೆ ಸ್ಕಾಲರ್‌ಶಿಪ್ ನೀಡುವುದು

ಋ) ಬಂದಿದೆ

ಌ) ಸರ್ಕಾರದಿಂದ ನೇರವಾಗಿ ಸಹಾಯವನ್ನು ನೀಡಿರುವುದಿಲ್ಲ ಆದರೆ ಮಡಕೇರಿ ಜಿಲ್ಲಾ ಪಂಚಾಯತ್‌ನಿಂದ ಅಮ್ಮತ್ತಿ ಹಾಗೂ ಹುದಿಕೇರಿಯಲ್ಲಿ ಈ ಹಿಂದೆ ನಡೆದ ಕೊಡಗು ಕುಟುಂಬ ಹಾಕಿ ಪಂದ್ಯಾವಳಿಗೆ ಸಹಾಯಧನವನ್ನು ನೀಡಲಾಗಿದೆ

ವಿಧಾನಸಭೆ ಸದಸ್ಯರಾದ ಶ್ರೀ ಐವಾನ್ ನಿಗ್ಲಿ ಇವರು ಮಂಡಿಸಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1923 ಕ್ಕೆ ಅನುಬಂಧ

ANNEXURE -A

List of completed District Stadia in the State

Sl No.	District Stadia (Completed)
1	Bangalore Rural (Hoskote)
2	Kolar
3	Shimoga
4	Tumkur
5	Chitradurga
6	Mysore
7	Mandya
8	Hassan
9	Chikkamagalore
10	Dakshina Kannada
11	Kodagu
12	Belgaum
13	Dharwad
14	Bijapur

15	Karwar	
16.	Gulbarga	
17	Bidar	
18	Raichur	
19	Bellary	
20.	Bangalore Urban	
	New District:	
	(Under Progress)	
21	Davanagere	Under P
22	Udupi	"
23	Chamarajanagar	"
24	Bagalkote	"
25	Gadag	"
26	Haveri	"
27	Koppal (to be started)	

ವಿಧಾನಸಭೆ ಸದಸ್ಯರಾದ ಶ್ರೀ ಐವಾನ್ ನಿಗ್ಲಿ ಇವರು ಮಂಡಿಸಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1923 ಕ್ಕೆ ಅನುಬಂಧ

ANNEXURE -B

List of completed Taluk Stadia in the State.

Sl No.	Taluk Stadia	District
1	Sagar	Shimoga
2	Ponnampet	Kodagu
3	Somwarpet	Kodagu

4	Napoklu	Kodagu
5	Karkala	Udupi
6	Harapanahalli	Davanagere
7	Chantamani	Kolar
8	Chikkaballapur	Kolar
9	Tiptur	Tumkur
10	Madugiri	Tumkur
11	Sira	Tumkur
12	Pavagada	Tumkur
13	Arasikere	Hassan
14	Channarayapattana	Hassan
15	K R Nagar	Mysore
16	Sankeshwar (Hukkeri)	Belgaum
17	Gokak	Belgaum
18	Jamakhandi	Bagalkote
19	Mudhol	Bagalkote
20	Lingasagur	Raichur
21	Maddur	Mandya
22	N R Pura	Chikkamagalore
23	Mudigere	Chikkamagalore
24	Kadur	Chikkamagalore
25	Jevargi	Gulbarga
26	Gurumithkal (Yadgir)	Gulbarga

27	Hosanagar	Shimoga
28	Yellapur	Uttar Kannada
29	Mundagod	Uttar Kannada

ವಿಧಾನಸಭೆ ಸದಸ್ಯರಾದ ಶ್ರೀ ಐವಾನ್ ನಿಗ್ಲಿ ಇವರು ಮಂಡಿಸಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1923 ಕ್ಕೆ ಅನುಬಂಧ

ANNEXURE - C

List of completed Indoor Stadia in the State.

Sl No.	Taluk Stadia	No of Stadium
1	Bangalore (U)	2
2	Mysore	1
3	Raichur	2
4	Gulbarga	1
5	Bellary	1
6	Mangalore	1
7	Chikkamagalore	1
8	Bagalkote	1
9	Chitradurga	1